

ಭಾರತೀಯ ಕ್ರಿಕೆಟ್‌ಗೆ ಕರ್ನಾಟಕ ನೀಡಿದ ಅತ್ಯುತ್ತಮ ಕೊಡುಗೆಗಳಲ್ಲಿ ಆರ್. ವಿನಯ್ ಕುಮಾರ್ ಒಬ್ಬರು. ಬೌಲಿಂಗ್ ಜೊತೆಗೆ ಬ್ಯಾಟಿಂಗ್‌ನಲ್ಲೂ ಉತ್ತಮ ಸಾಧನೆ ತೋರಿ, ತಮ್ಮ ನಾಯಕತ್ವದಲ್ಲಿ ಕರ್ನಾಟಕವನ್ನು ದೇಸಿ ಕ್ರಿಕೆಟ್‌ನಲ್ಲಿ ಉತ್ತುಂಗಕ್ಕೇರಿಸಿದ ವಿನಯ್ ಈಗ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಈ ಸಂಕ್ರಮಣ ಸಂದರ್ಭದಲ್ಲಿ ವಿನಯ್ ಕುಮಾರ್ ಅವರೊಂದಿಗೆ ನಡೆಸಿದ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.

■ ಪ್ರಮೋದ

‘ಸುಧಾ’ ಸಂದರ್ಶನದಲ್ಲಿ ಕ್ರಿಕೆಟಿಗ ವಿನಯ ಕುಮಾರ್ ಮುಕ್ತಮಾತು

# ಸಿಕ್ಕ ಫಲಕಿಂತ ಪಟ್ಟ ಶ್ರಮವೇ ಖುಷಿ ನೀಡಿದೆ

◆ **ರಣಜಿ ಟೂರ್ನಿಯಲ್ಲಿ 14 ವರ್ಷಗಳ ಕಾಲ ಪ್ರಶಸ್ತಿಯ ಬರ ಎದುರಿಸಿದ್ದ ಕರ್ನಾಟಕ ತಂಡಕ್ಕೆ ಟ್ರೋಫಿ ತಂದುಕೊಟ್ಟ ನಿಮ್ಮ ನಾಯಕತ್ವದ ಆ ದಿನಗಳ ಬಗ್ಗೆ ಹೇಳಿ?**

ಬಾಲ್ಯದಲ್ಲಿ ಕ್ರಿಕೆಟ್ ಆಡಲು ಆರಂಭಿಸಿದ ದಿನಗಳಲ್ಲಿ ಪ್ರತಿಯೊಬ್ಬರಿಗೂ ಭಾರತ ತಂಡ ಪ್ರತಿನಿಧಿಸಬೇಕು, ಐಪಿಎಲ್ ಹಾಗೂ ರಣಜಿ ಟೂರ್ನಿಯಲ್ಲಿ ಆಡಬೇಕು ಎನ್ನುವ ಕನಸು ಸಹಜವಾಗಿ ಇದ್ದೇ ಇರುತ್ತದೆ. ಇದರಿಂದ ನಾನೂ ಹೊರತಲ್ಲ. ರಣಜಿ ತಂಡದಲ್ಲಿ ಸ್ಥಾನ ಸಿಕ್ಕಮೇಲೆ ಟ್ರೋಫಿ ಗೆಲ್ಲಬೇಕು ಎನ್ನುವ ಆಸೆ ಮೂಡುತ್ತದೆ. ಗೆದ್ದ ಮೇಲೆ ಮತ್ತೊಮ್ಮೆ ಗೆಲ್ಲಬೇಕು ಎನ್ನುವ ಕನಸು ಕಾಡುತ್ತದೆ. ಹೀಗೆ ಒಂದಾದ ಮೇಲೊಂದರಂತೆ ಸಾಧನೆಯ ಆಸೆ ಕಟ್ಟಿಕೊಂಡು ಅವುಗಳನ್ನು ನನಸು ಮಾಡಿಕೊಳ್ಳುತ್ತಾ ಹೋದೆ. ಆಗಿನ ತಂಡ ಎಲ್ಲ ವಿಭಾಗದಲ್ಲಿ ಬಲಿಷ್ಠವಾಗಿತ್ತು, ಒಬ್ಬರ ಮೇಲೆಯೇ ಅವಲಂಬಿತವಾಗಿರಲಿಲ್ಲ. ಪ್ರತಿ ಆಟಗಾರನೂ ದೊಡ್ಡ ಶಕ್ತಿಯಾಗಿದ್ದರು. ಇದರಿಂದಾಗಿ ಎರಡು ವರ್ಷಗಳ ಅವಧಿಯಲ್ಲಿ ತಲಾ ಎರಡು ಬಾರಿ ರಣಜಿ, ಇರಾನಿ ಕಪ್ ಮತ್ತು ವಿಜಯ ಹಜಾರೆ ಟೂರ್ನಿಯಲ್ಲಿ ಚಾಂಪಿಯನ್ ಎನಿಸಿಕೊಳ್ಳಲು ಸಾಧ್ಯವಾಯಿತು.

◆ **ಸ್ಥಾನ ಗಳಿಸಲು ಸಾಕಷ್ಟು ಪೈಪೋಟಿಯಿದ್ದ ಕರ್ನಾಟಕ ತಂಡದಲ್ಲಿ ನಾಯಕರಾಗಿ ಕೆಲಸ ನಿರ್ವಹಿಸಿದ ಅನುಭವ ಹೇಗಿತ್ತು?**

ಗೆದ್ದಾಗ ಹಿಗ್ಗುವುದು, ಸೋತಾಗ ಕುಗ್ಗುವುದು ಸರಿಯಲ್ಲ. ಸಮಚಿತ್ತದಿಂದ ಇದ್ದರೆ ಎಲ್ಲ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗುತ್ತದೆ. ಕೆಲವರಿಗೆ ಬೇಗನೆ ಯಶಸ್ಸು ಸಿಗುತ್ತದೆ. ಇನ್ನೂ ಕೆಲವರಿಗೆ ಕಷ್ಟಪಟ್ಟರೂ ಬೇಗನೆ ಪ್ರತಿಫಲ ಲಭಿಸುವುದಿಲ್ಲ. ಇದು ಬೇರೆ ವಿಷಯ; ಫಲಿತಾಂಶಕ್ಕಿಂತ ಹೆಚ್ಚಾಗಿ ನಾವು ಪಟ್ಟ ಕಷ್ಟ ಏನೆಂಬುದು